**<u>ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದಃ</u>**

1) ಸರ್ವೆ ನಂ.42 ರಲ್ಲಿನ 18 ಗುಂಟೆ ಜಮೀನು ಸಂಬಂಧ ನನ್ನ ತಾತನ ಕಾಲದಲ್ಲಿ ಮತ್ತು ನನ್ನ ತಂದೆಯ ಜೀವಿತಾವಧಿಯಲ್ಲಿ ವಿಭಾಗ ಆಗಿರಲಿಲ್ಲ. 1971 ರ ವೇಳೆಗೆ ಆಗಲೇ ನನ್ನ ತಂದೆ ಮೃತಪಟ್ಟಿದ್ದರು. ಆ ಸಮಯದಲ್ಲಿ ನಮ್ಮ ಕುಟುಂಬದಲ್ಲಿ ನನ್ನ ತಾಯಿ ಮಾತ್ರ ಇದ್ದು ಅವರೊಬ್ಬರೇ ಕುಟುಂಬದ ಹಿರಿಯ ಸದಸ್ಯರಾಗಿದ್ದರು. ಆದ ಕಾರಣ ನಿಮ್ಮ ತಾಯಿಯ ತಂದೆ ಅಪ್ರಾಪ್ತನಾಗಿದ್ದ ನನ್ನ ಹೆಸರಿಗೆ ಮತ್ತು ನನ್ನ ತಾಯಿಯ ಹೆಸರಿಗೆ ದಾವಾ 1ನೇ ಐಟಂ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ತನ್ನ ತಾಯಿಯನ್ನು ತನ್ನ ಸಂರಕ್ಷಕರನ್ನಾಗಿ ತೋರಿಸಿ ಖರೀದಿ ಮಾಡಿದ್ದಾಗಿ ನುಡಿಯುತ್ತಾರೆ. ವಾದಿಯರಿಗೂ ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರಿಗೂ ದಾವಾ ಸ್ವತ್ತುಗಳಲ್ಲಿ ಹಕ್ಕು ಇದೆ ಎಂದು ನಮಗೆ ತಿಳಿದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**